ಮನಸ್ಸು ಎಲ್ಲರೊಳಗೂ ಸುಪ್ತವಾಗಿರುತ್ತದೆಯೇನೋ... ರೆಕ್ಕೆಗಳ ಸ್ವಚ್ಛಂದ ಅದಕ್ಕೆ ಇಷ್ಟವಿರಬೇಕು... ಎಲ್ಲವೂ ಹಾಗೇ... ಪ್ರಕೃತಿಯ ಕಣ ಕಣವೂ ಸ್ವಚ್ಛಂದತೆಯ ನಡೆಯಲ್ಲಿಯೇ ಸುಂದರ... ಆದರೆ ನಾವ್ಯಾಕೋ ಮನುಷ್ಯರು ಕಟ್ಟಿಹಾಕುವ ಆಟದಲ್ಲೇ ಆಯುಷ್ಯ ಕಳೆದುಬಿಡುತ್ತೇವೆ... ಸಣ್ಣದಾಗಲೀ, ದೊಡ್ಡದಾಗಲೀ ಸ್ವಾರ್ಥವೇ ಆಳುತ್ತದೆ. ಅದಕ್ಕೇ ಇರಬಹುದು ನಮ್ಮ ಸೌಂದರ್ಯವೂ ಅಪೂರ್ಣ... ಎಷ್ಟೇ ಸುಣ್ಣ ಬಣ್ಣ ಬಳಿದುಕೊಂಡರೂ ಕಪ್ಪು ಚುಕ್ಕೆಯೊಂದನ್ನು ಇಟ್ಟುಕೊಳ್ಳದೆ ನಮ್ಮ ಅಲಂಕಾರವೇ ಪೂರ್ಣವಾಗುವುದಿಲ್ಲ. ಮನುಷ್ಯನ ಹಾರಬೇಕೆನ್ನುವ ಆಸೆಗೆ ವಿಮಾನ ರಾಕೆಟ್ಟುಗಳಾದಿಯಾಗಿ ಎಲ್ಲವೂ ಜನ್ಮತಾಳಿವೆ. ಆದರೂ ನಮ್ಮದೇ ಬೆನ್ನಿಗೆರಡು ರೆಕ್ಕೆ ಮೂಡಿಬಿಟ್ಟಿದ್ದರೆ ಎನ್ನುವ ಮನುಷ್ಯನ ಹಪಾಹಪಿ ತೀರುವಂಥದ್ದಲ್ಲ. ಮೊಟ್ಟೆ ಲಾರ್ವಾ ಆಗಿ, ಲಾರ್ವಾ ಹುಳುವಾಗಿ, ಹುಳುವೊಂದು ಚಿಟ್ಟೆಯಾಗುವ ರೂಪಾಂತರದ ಸೋಜಿಗ ನಮಗೂ ಸಾಧ್ಯವಾಗುವಂತಿದ್ದರೆ... ಎನ್ನುವ ನಿರೀಕ್ಷೆ ಕೊನೆ ಕಾಣಲಾರದೇನೋ. ಸೃಷ್ಟಿಯಲ್ಲಿಯೇ ಬುದ್ಧಿವಂತ ಎನಿಸಿಕೊಳ್ಳುವ ಮನುಷ್ಯನಿಗೇ ಇಂಥ ದುರಾಸೆಯಾಗಿಬಿಟ್ಟರೆ ಉಳಿದೆಲ್ಲವುಗಳ ಪಾಡೇನು? ಅವೂ ನಮ್ಮೊಂದಿಗೆ ದುರಾಸೆ ಪಡಲಿಕ್ಕೆ ಪೈಪೋಟಿ ಮಾಡಿಕೊಂಡು ನಿಂತುಬಿಟ್ಟರೆ! ಹಾಗಾದರೆ ಮನುಷ್ಯನ ದುರಾಸೆಗೊಂದಿಷ್ಟು ಕಡಿವಾಣವೇನಾದರೂ ಬೀಳುತ್ತಿತ್ತೇನೋ... ಗೊತ್ತಿಲ್ಲ. ಯಾಕೆಂದರೆ ವಿಷಮ ಪರಿಸ್ಥಿತಿಗಳಲ್ಲೂ ಅಸಾಧ್ಯ ನಡೆ ಮನುಷ್ಯನದ್ದು.

ಬಾಲ್ಯದ ನೆನಪುಗಳಿಗೂ ತಾಕಿದ ಹರೆಯದ ಬಿಸುಪಿಗೂ ಸೋಕಿದ ಹಕ್ಕಿಪುಚ್ಚಗಳು ಈಗಲೂ ಗಾಯದ ಮೇಲೆ ಹರಡಿಕೊಳ್ಳುವ ಮುಲಾಮಿನಷ್ಟೇ ನಯವಾಗಿ ಜೀವನದ ಜಂಜಾಟಗಳಲ್ಲಿ ನಜ್ಜುಗುಜ್ಜಾದ ಮನಸ್ಸನ್ನು ಸಂತೈಸುತ್ತವೆ. ಎಷ್ಟೇ ಕ್ಷುಲ್ಲಕ ಎಂದು ಭಾವಿಸಬಹುದಾದರೂ ಸೋಕಿದ್ದು ಸುಳ್ಳಲ್ಲ... ಸಂತೈಸಿದ್ದು ಸುಳ್ಳಲ್ಲ... ಯಾವುದೂ ಸುಳ್ಳಲ್ಲ ಎಂದಮೇಲೆ ಸತ್ಯವೆನ್ನಲು ಮನಸ್ಸೇಕೆ ಬರುವುದಿಲ್ಲವೋ... ಸದಾ ದೊಡ್ಡದನ್ನೇ, ದುಬಾರಿಯಾದುದನ್ನೇ ಕಣ್ಣಗಲಿಸಿ ನೋಡುವ ದೃಷ್ಟಿಗೆ ಸಣ್ಣದು ಕಾಣಲಾಗದಂತೆ ಕಣ್ಣ ವ್ಯಾಪಿಸಿಕೊಂಡ ಕಲ್ಲ ಹೂವು... ಅದನ್ನು ಕಿತ್ತು ಬಿಸಾಡಬೇಕಾದ ಕೈಗಳಿಗೆ ಏಳಲಾರದಷ್ಟು ಆಲಸ್ಯ... ಯಾರದ್ದೇನಾರೂ ಇರಲಿ ನಾನಂತೂ ಹಕ್ಕಿಪುಚ್ಛದ ನಾವೆಯಲ್ಲಿ ಪ್ರತಿದಿನ ತೇಲಿಹೋಗುತ್ತೇನೆ.

### ಆಶಾ ಜಗದೀಶ್

ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆಯಲ್ಲಿ ನೆಲೆಸಿರುವ ಲೇಖಕಿ ಆಶಾ 'ಪ್ರಜಾವಾಣಿ' ದಿನಪತ್ರಿಕೆಯ ಭೂಮಿಕಾ ಪುರವಣಿಯ ಲಲಿತ ಪ್ರಬಂಧ ಸ್ಪರ್ಧೆ ಹಾಗೂ 'ಸುಧಾ' ವಾರಪತ್ರಿಕೆಯ ಯುಗಾದಿ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನಗಳನ್ನು ಪಡೆದಿದ್ದಾರೆ. ಕತೆ, ಕವಿತೆ, ಪ್ರಬಂಧ, ಲೇಖನಗಳು ಪ್ರಕಟವಾಗಿವೆ. ಮೊದಲ ಕವನ ಸಂಕಲನ 'ಮೌನ ತಂಬೂರಿ'.